ಕ್ರೋಡೀಕರಿಸುತ್ತಿದ್ದ ರಾಧಾನಾಥ್ ಶಿಕದಾರ್ ಎಂಬ ಉತ್ಸಾಹಿ, 'ಸರ್ವೇ ಆಫ್ ಇಂಡಿಯಾ'ದ ಆಂಡ್ರೂ ವಾಗ್ ಕೆಲಸಮಾಡುತ್ತಿದ್ದ ಕೊಠಡಿಗೆ ಮೆಲ್ಲನೆ ಬಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ: 'ಸರ್ ಪತ್ತೆಯಾಯಿತು, XV ಎಂದು ಹೆಸರು ಕೊಟ್ಟಿದ್ದೇವಲ್ಲ, ಅದೇ ಜಗತ್ತಿನ ಅತಿ ಎತ್ತರದ ಶಿಖರ' ಎಂದ. 'ದತ್ತಾಂಶಗಳನ್ನು ಮರು ಪರಿಶೀಲಿಸಿಯೇ ಈ ಫಲಿತಾಂಶವನ್ನು ಹೇಳುತ್ತಿದ್ದೇನೆ' ಎಂದು ಆತ್ಮವಿಶ್ವಾಸದಿಂದ ಹೇಳಿದ.

ರಾಧಾನಾಥ್ ಹೇಳಿದ ಶೃಂಗದ ಎತ್ತರ 8,848 ಮೀಟರ್ (29,028 ಅಡಿ). ಆಂಡ್ರೂ ವಾಗ್ ಒಡನೆಯೇ ನಂಬಲಿಲ್ಲ. ಏಕೆಂದರೆ ಈ ಅಂಕೆ ಸಂಖ್ಯೆಯಲ್ಲಿ ಹೆಚ್ಚುಕಡಿಮೆಯಾಗಿದ್ದರೆ ಸರ್ವೇ ಇಲಾಖೆಗೆ ಅಪಖ್ಯಾತಿ ತರುತ್ತಿತ್ತು. ಮೇಲಧಿಕಾರಿಗಳ ಕೋಪವನ್ನು ಎದುರಿಸಬೇಕಾಗಿತ್ತು. ಅಲ್ಲದೆ ಇಡೀ ಜಗತ್ತಿನಲ್ಲೇ ಅತಿ ಎತ್ತರದ ಶಿಖರ ಎಂದು ಘೋಷಿಸಬೇಕಾದರೆ ತಾನೇ ಮತ್ತೆ ಪರೀಕ್ಷಿಸಬೇಕು ಎಂದು ರಾಧಾನಾಥ್‌ನೊಡನೆ ಕೂತು ಯಾವ ಯಾವ ಭಾಗದಿಂದ ಆ ಶಿಖರವನ್ನು ಅಳೆದಿದೆಯೋ ಎಲ್ಲ ದತ್ತಾಂಶವನ್ನೂ ಸ್ವತಃ ಪರೀಕ್ಷಿಸಿದ. ವಾಸ್ತವವಾಗಿ ಅವನ ಮನಸ್ಸು ಒಪ್ಪುತ್ತಿದ್ದರೂ ಏಕೋ ಒಡನೆಯೇ ಘೋಷಿಸಬಾರದು ಎಂದು ತೀರ್ಮಾನಿಸಿದ. ನಾಲ್ಕು ವರ್ಷಗಳ ನಂತರ, ಅಂದರೆ 1856ರಲ್ಲಿ ಅಧಿಕೃತವಾಗಿ ಈ ಶಿಖರ ಜಗತ್ತಿನ ಅತಿ ಎತ್ತರದ ಶಿಖರ ಎಂದು ಘೋಷಿಸಿದ. ಹಾಗೆ ಘೋಷಿಸುವಾಗಲೇ ಆ ಶಿಖರಕ್ಕೆ ಹೆಸರು ಕೊಡಬೇಕೆಂಬ ಇರಾದೆಯೂ ಹುಟ್ಟಿತು. ಆದರೆ ಸ್ಥಳೀಯ ಹೆಸರುಗಳನ್ನು ಬಳಸುವಂತಿರಲಿಲ್ಲ. ಏಕೆಂದರೆ ಟಿಬೆಟ್‌ನಲ್ಲಿ ಈ ಶಿಖರಕ್ಕೆ 'ಕೊಮಲುಂಗ' ಎಂಬ ಹೆಸರಿತ್ತು. ನೇಪಾಳದಲ್ಲಿ 'ಸಾಗರಮಾತಾ' ಎಂಬ ಹೆಸರಿತ್ತು. ಇದು ಬೇಡವೆಂದು ಕೈಬಿಟ್ಟು ಧೈರ್ಯಮಾಡಿ ಈ ಶಿಖರಕ್ಕೆ ಜಾರ್ಜ್ ಎವರೆಸ್ಟ್‌ನ ಹೆಸರನ್ನು ಸೂಚಿಸಿದ. 1830–43ರ ನಡುವೆ 'ಸರ್ವೇ ಆಫ್ ಇಂಡಿಯಾ'ದ ಮಹಾ ನಿರ್ದೇಶಕನಾಗಿ ಜಾರ್ಜ್ ಎವರೆಸ್ಟ್ ಭಾರತದ ಮಹಾ ಮೋಜಣಿಯ ಕೆಲಸಕ್ಕೆ ದೊಡ್ಡ ಕೊಡುಗೆಯನ್ನೇ ಕೊಟ್ಟಿದ್ದ. ಆದರೆ ಜಾರ್ಜ್ ಎವರೆಸ್ಟ್, ಆ ಶಿಖರಕ್ಕೆ ತನ್ನ ಹೆಸರನ್ನಿಡುವುದು ಬೇಡ ಎಂದು ನಿರಾಕರಿಸಿಬಿಟ್ಟ. ಆದರೆ ವಾಗ್, 'ರಾಯಲ್ ಜಿಯಾಗ್ರಫಿಕಲ್ ಸೊಸೈಟಿ'ಗೆ ಮತ್ತೆ ಮತ್ತೆ ಮನವರಿಕೆಮಾಡಿ ಎವರೆಸ್ಟ್ ಹೆಸರನ್ನೇ ಇಡುವಂತೆ ಒತ್ತಾಯಿಸಿದ. ಕೊನೆಗೆ ಆ ಹೆಸರನ್ನು ಸ್ಥಿರಗೊಳಿಸಲೇಬೇಕಾಯಿತು. ವಿಶೇಷವೆಂದರೆ ಜಗತ್ತಿನ ಯಾವ ಪರ್ವತ ಶಿಖರಕ್ಕೂ ಯಾವ ವ್ಯಕ್ತಿಯ ಹೆಸರನ್ನೂ ಇಟ್ಟಿಲ್ಲ. ಹಿಮಾಲಯದ ಎವರೆಸ್ಟ್ ಶಿಖರ ಆ ಸಂಪ್ರದಾಯವನ್ನು ಮುರಿಯುವಂತೆ ಮಾಡಿತು. 1857ರಿಂದ ಜಾಗತಿಕವಾಗಿ ಈ ಹೆಸರೇ ಸ್ಥಿರವಾಗಿ ನಿಂತಿತು ಮತ್ತು ಎಲ್ಲ ದಾಖಲೆಗಳಲ್ಲೂ ಅದು ಉಲ್ಲೇಖವಾಯಿತು.

ಈ ನಡುವೆ ಒಂದು ವಿಶಿಷ್ಟ ಪ್ರಸಂಗ ನಡೆಯಿತು. ಪರ್ವತದ ಎತ್ತರವನ್ನು ಅಳೆದರೆ ಸಾಲದು, ಅದಕ್ಕೆ ಆಧಾರವಾಗಿ ಸಾಗರದ ಮಟ್ಟವನ್ನು ಬಳಸಬೇಕಾಗುತ್ತದೆ. ಆದರೆ ಗುರುತ್ವ ಎಂಬ ಗುರುಸಾರ್ವಭೌಮ ಸಾಗರಮಟ್ಟವನ್ನು ಸರಿಯಾಗಿ ಅಳೆಯಲು ಬಿಡುವುದಿಲ್ಲ. ಅಲ್ಲಲ್ಲೇ ಎಳೆಯುತ್ತ ಹೋಗುತ್ತದೆ. ಹೀಗಾಗಿ ನೂರಾರು ಬಾರಿ ಅಳೆದು ಒಂದು ಖಚಿತವಾದ ಮೌಲ್ಯವನ್ನು ಕೊಡಬೇಕಾಗುತ್ತದೆ. ಇದು ಭಾರಿ ಫಜೀತಿ ಕೆಲಸ. ಕಾಲ ಮತ್ತು ವ್ಯಕ್ತಿಶ್ರಮವನ್ನು ದೊಡ್ಡದಾಗಿಯೇ ಬೇಡುತ್ತದೆ. ಈ ತೊಂದರೆಯನ್ನು ಪರಿಹರಿಸಲೇಬೇಕಾಗಿತ್ತು. ಕೊನೆಗೆ ಉತ್ತರ ಪ್ರದೇಶದ ಒಂದು ಭಾಗದಲ್ಲಿ ಗುರುತ್ವವನ್ನು ಅಳೆಯಬೇಕೆಂದು ಸಂಸ್ಥೆ ನಿಶ್ಚಯಿಸಿತು. ಇದಕ್ಕಾಗಿ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಇದ್ದ ಒಬ್ಬ ಪಾದ್ರಿಯ ಸೇವೆಯನ್ನು ಕೋರಲಾಯಿತು. ಆತನ ಹೆಸರು ಹೆನ್ರಿ ಪ್ರಾಟ್. ಆತ ಕ್ರೈಸ್ತ ಧರ್ಮವನ್ನು ಪ್ರಚಾರಮಾಡಲು ಬಂದವನು. ಅದನ್ನೇ ಗುರಿಯಾಗಿಟ್ಟುಕೊಂಡವನು. ವಿಶೇಷವೆಂದರೆ ಗಣಿತ ಮತ್ತು ಖಗೋಳದ ಲೆಕ್ಕಾಚಾರದಲ್ಲಿ ಆತ ತುಂಬ ಬುದ್ಧಿಶಾಲಿ. ಲೋಲಕವನ್ನು ಹಿಡಿದು ಗಮನಿಸಿದಾಗ ನಿರೀಕ್ಷಿಸಿದಂತೆ ದೊಡ್ಡ ಗಾತ್ರದ ಹಿಮಾಲಯ ಪರ್ವತದತ್ತ ಅದು ತೊನೆಯಬೇಕಾಗಿತ್ತು. ಆದರೆ ಹಾಗಾಗಲಿಲ್ಲ, ಬದಲು ಭಾರತದ ದಕ್ಷಿಣ ಪರ್ಯಾಯ ದ್ವೀಪದ ಕಡೆ ವಾಲುತ್ತಿತ್ತು. ಪ್ರಾಟ್ ಕ್ಷಣವೂ ಯೋಚಿಸದೆ ಫಲಿತಾಂಶವನ್ನು ಪ್ರಕಟಿಸಿದ. ಹಿಮಾಲಯ ಪರ್ವತ ಗಾತ್ರದಲ್ಲಿ ದೊಡ್ಡದಿರಬಹುದು, ಆದರೆ ಅದಕ್ಕೆ ಹೆಚ್ಚಿನ ದ್ರವ್ಯರಾಶಿ ಇಲ್ಲ. ದಕ್ಷಿಣ ಪರ್ಯಾಯ ದ್ವೀಪದ ಶಿಲೆಗಳು ಹೆಚ್ಚು ಗಾತ್ರವಿಲ್ಲದಿದ್ದರೂ ಸಾಂದ್ರವಾಗಿದೆ ಅಂದರೆ ಅವುಗಳ ದ್ರವ್ಯರಾಶಿ ಹೆಚ್ಚು ಎಂದು ಹೇಳಿದಾಗ, ಅದೊಂದು ಭೂವಿಜ್ಞಾನದಲ್ಲಿ ಬಹು ದೊಡ್ಡ ತಿರುವು ಪಡೆಯಿತು. ಈಗ ಅದೇ ಜೋಕನ್ನು ನೀವು ನೆನೆಸಿಕೊಳ್ಳಬಹುದು: 'ಒಂದು ಕಿಲೋಗ್ರಾಂ ಕಬ್ಬಿಣ ಹೆಚ್ಚು ತೂಕವೋ, ಅಥವಾ ಒಂದು ಕಿಲೋಗ್ರಾಂ ಹತ್ತಿಯೋ?'




ಖಂಡಗಳ ಸರಿತ

## ಏನಾಗುತ್ತಿದೆ ಹಿಮಾಲಯ ಶ್ರೇಣಿಗೆ?

ನೀವು ಹಿಮಾಲಯ ಪರ್ವತ ಶ್ರೇಣಿಯನ್ನು ದೂರದಿಂದ ನೋಡಿದರೂ ಸಾಕು, ಒಂದು ಚಿತ್ರ ಎದ್ದು ಕಾಣುತ್ತದೆ. ನೀರಿನಲ್ಲಿ ಅದ್ದಿದ ಸೀರೆಯನ್ನೋ ಪಂಚೆಯನ್ನೋ ತಿರುಚಿ ನೀರನ್ನು ಹಿಂಡಿ ಒಣಗಿ ಹಾಕಿದರೆ ಮಡಿಕೆ ಮಡಿಕೆಯಾಗುತ್ತದಲ್ಲ ಹಾಗೆ ಕಾಣುತ್ತದೆ ಇಡೀ ಹಿಮಾಲಯ. ನಿಜ, ಇಡೀ ಪರ್ವತಮಾಲೆಯಲ್ಲಿ ಮಡಿಕೆ ಬಿದ್ದಿದೆ, ಅಲ್ಲಲ್ಲೇ ಮುರಿದುಹೋಗಿದೆ, ಒತ್ತಡಕ್ಕೆ ಸಿಲುಕಿ ಇನ್ನೆಷ್ಟೋ ಕಡೆ ಒಂದರ ಮೇಲೆ ಒಂದು ಭಾರೀ ಶಿಲಾಸ್ತರಗಳು ಒರಗಿಬಿಟ್ಟಿವೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಭೂವಿಜ್ಞಾನಿಗಳು ಇಡೀ ಹಿಮಾಲಯ ಭೂಗರ್ಭದಿಂದ ಎದ್ದ ಪರ್ವತ ಭಾಗವಲ್ಲ, ಇಲ್ಲಿರುವುದು ಸಮುದ್ರ ತಳದಲ್ಲಿ ಸಂಚಯಿಸಿದ್ದ ಶಿಲೆಗಳು ಎಂಬ ಸುದ್ದಿಯನ್ನು ಲೋಕಕ್ಕೆ ಕೊಟ್ಟಾಗ, 'ಹಾಗಾದರೆ ಹಿಮಾಲಯವಿದ್ದ ಜಾಗದಲ್ಲಿ ಸಮುದ್ರವಿತ್ತೇ' ಎಂದು ಊಹಿಸಿಯೇ ವಿಜ್ಞಾನಿಗಳು